**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಇವರ ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಉತ್ತರ**

ವಿಷಯ :

**ರಾಷ್ಟ್ರೀಯ ಜೀವನೋಪಾಯ ಅಭಿಯಾನ (ಸಂಜೀವಿನಿ ಯೋಜನೆ) ಯಡಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಸ್ವ-ಸಹಾಯ ಗುಂಪುಗಳ ಒಕ್ಕೂಟವನ್ನು ನಿರ್ವಹಿಸುತ್ತಿರುವ ಮುಖ್ಯ ಪುಸ್ತಕ ಬರಹಗಾರರು (MBK) ಮತ್ತು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು (LCRP) ವೇತನ ಹೆಚ್ಚಳ, ಪ್ರಯಾಣ ಭತ್ಯೆ, ESI-PF ಸೌಲಭ್ಯ, ಗುರುತಿನ ಚೀಟಿ, ಸಮವಸ್ತ್ರ ಹಾಗೂ ಹುದ್ದೆ ಖಾಯಂಮಾತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವ ಕುರಿತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರ ಗಮನ ಸೆಳೆಯುವುದು.**

ಉತ್ತರ

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದಡಿ 60:40 ಅನುಪಾತದಲ್ಲಿ ರಾಜ್ಯದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸಲಾಗಿದ್ದು, ಈ ಒಕ್ಕೂಟಗಳು ಸ್ವ-ನಿಯಂತ್ರಿತ, ಸ್ವ-ಆಡಳಿತವನ್ನು ನಡೆಸುತ್ತಿರುವ ಸಮುದಾಯ ಆಧಾರಿತ ಸಂಸ್ಥೆಗಳಾಗಿರುತ್ತದೆ. ಸದರಿ ಸಂಸ್ಥೆಗಳನ್ನು ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಜೀವನೋಪಾಯ ಚಟುವಟಿಕೆಯನ್ನು ನೀಡಿ, ಸುಸ್ಥಿರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಮಾಡುವ ಉದ್ದೇಶದಿಂದ ರಚಿಸಲಾಗಿರುತ್ತದೆ. ಈ ಸಮುದಾಯ ಆಧಾರಿತ ಸಂಸ್ಥೆಗಳ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟವನ್ನು ಕಾರ್ಯಕಾರಿ ಸಮಿತಿಯು ನಿರ್ವಹಿಸುತ್ತದೆ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಮಾರ್ಗಸೂಚಿಗಳಂತೆ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳ ದಿನನಿತ್ಯ ಕಾರ್ಯನಿರ್ವಹಣೆಗೆ, ಸಾಮಾಜಿಕ ಅಭಿವೃದ್ಧಿ ಮತ್ತು ಸಮುದಾಯ ಸಂಘಟನೆಗೆ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟವು ಗೌರವಧನ ಆಧಾರದಡಿ ಒಬ್ಬ ಮುಖ್ಯ ಪುಸ್ತಕ ಬರಹಗಾರರು(MBK) ಮತ್ತು ಇಬ್ಬರು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳು(LCRP) ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳ ಚಟುವಟಿಕೆಗಳಿಗನುಸಾರ ಆಯಾ ಮಾಹೆಯಲ್ಲಿ ನಿಗದಿಪಡಿಸಲಾದ ಸೇವೆಗಳಡಿ ನಿರ್ದಿಷ್ಟ ದಿನಗಳಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಾರೆ. ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:-

- ಸದರಿ ಮುಖ್ಯ ಪುಸ್ತಕ ಬರಹಗಾರರು(MBK) ಮತ್ತು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು(LCRP) ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಗೌರವಧನ ಆಧಾರಿತದಡಿ ಅಗತ್ಯ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಾಗಿರುತ್ತಾರೆ.

- ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳಂತೆ ಈ ಯೋಜನೆಯಡಿ ಸದರಿ ಸಿಬ್ಬಂದಿಗಳಿಗೆ 3 ವರ್ಷಗಳಿಗೆ ಮಾತ್ರ ಅವರಿಗೆ ಸೂಚಿತ ಚಟುವಟಿಕೆಗಳಿಗೆ ಗೌರವಧನವನ್ನು ನೀಡಲಾಗುವುದು. ಅಂದರೆ ಯೋಜನಾ ಚಟುವಟಿಕೆಗಳ ಪ್ರಾರಂಭದಿಂದ 3 ವರ್ಷಗಳವರೆಗೆ ಮಾತ್ರ ಗೌರವಧನವನ್ನು ಭರಿಸಲಾಗುತ್ತದೆ. 3 ವರ್ಷಗಳ ನಂತರ ಗ್ರಾಮ

ಪಂಚಾಯಿತಿ ಮಟ್ಟದ ಒಕ್ಕೂಟಗಳು ತಮ್ಮ ವರಮಾನ/ಆದಾಯಗಳ ಮೂಲಕ ಈ ಗೌರವಧನವನ್ನು ಭರಿಸಬೇಕಾಗಿರುತ್ತದೆ. ಈ ಮಾರ್ಗಸೂಚಿಗಳಂತೆ ಪ್ರಸ್ತುತ ಅಭಿಯಾನದಡಿಯಲ್ಲಿನ ಪ್ರಸ್ತುತ 5910 ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಡಿ ಮುಖ್ಯ ಪುಸ್ತಕ ಬರಹಗಾರರು ಮತ್ತು ಪ್ರತಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಕ್ಕೆ ಇಬ್ಬರಂತೆ ಪ್ರಸ್ತುತ ಒಟ್ಟು 11739 ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು (LCRP) ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯದಲ್ಲಿ ಈಗಾಗಲೇ 2187 ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು 3 ವರ್ಷ ಪೂರೈಸಿದ್ದು ಈ ಒಕ್ಕೂಟಗಳಡಿ ಕಾರ್ಯನಿರತ ಎಂ.ಬಿ.ಕೆ ಮತ್ತು ಎಲ್.ಸಿ.ಆರ್.ಪಿಗಳಿಗೆ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ಬಂದಿರುವ ವರಮಾನದಿಂದ ಗೌರವಧನವನ್ನು ನೀಡುತ್ತಿದ್ದಾರೆ.

- ಪ್ರಸ್ತುತ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಪ್ರತಿ ತಿಂಗಳು ಎಂಬಿಕೆ(MBK)ಗಳಿಗೆ ಅವರುಗಳು ಸಲ್ಲಿಸಿರುವ ಸೇವೆಗಳಿಗೆ ಅನುಸಾರವಾಗಿ ಗೌರವಧನ ರೂ.5000/- ಮತ್ತು ಕ್ರಮವಾಗಿ ಎಲ್‌ಸಿಆರ್‌ಪಿಗಳಿಗೆ ರೂ.2500/- ಗಳನ್ನು ನಿಗದಿಪಡಿಸಿದ್ದು ಒಕ್ಕೂಟದಿಂದಲೇ ಈ ಗೌರವಧನವನ್ನು ನೀಡಲಾಗುತ್ತಿದೆ.

- ಮುಂದುವರೆದು ಎಂಬಿಕೆ ಮತ್ತು ಎಲ್‌ಸಿಆರ್‌ಪಿ(LCRP)ಗಳಿಗೆ ಈಗ ನೀಡುತ್ತಿರುವ ಗೌರವಧನಕ್ಕೆ ಹೊರತುಪಡಿಸಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಅಭಿಯಾನದಡಿ ಲೋಕೋಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಈ ಚಟುವಟಿಕೆಗೆ ಸಂಬಂಧಪಟ್ಟ ಕಾರ್ಯಗಳಿಗೆ ಪ್ರತಿ ಮಾಹೆಗೆ ಎಂಬಿಕೆ(MBK)ಗಳಿಗೆ ರೂ.1250/- ಹಾಗೂ ಎಲ್‌ಸಿಆರ್‌ಪಿಗಳಿಗೆ ರೂ.750/- ಹಾಗೂ ಸಾಮಾಜಿಕ ಸೇರ್ಪಡೆ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಎಲ್‌ಸಿಆರ್‌ಪಿ(LCRP)ಗಳಿಗೆ ರೂ.1250/- ಮಾಹೆವಾರು ನೀಡಲಾಗುತ್ತಿದೆ. ಅಂದರೆ ಪ್ರಸ್ತುತ ಮಾಹೆಗೆ ಎಂಬಿಕೆ(MBK)ಗಳು ರೂ.6250/- ಹಾಗೂ ಎಲ್‌ಸಿಆರ್‌ಪಿ(LCRP)ಗಳು ರೂ.4500/-ಗಳ ಗೌರವಧನವನ್ನು ಪಡೆಯುತ್ತಿದ್ದಾರೆ.

- ವಾರ್ಷಿಕ ಹೆಚ್ಚುವರಿಯಾಗಿ ವಿಪಿಆರ್‌ಪಿ ಸಮೀಕ್ಷೆ ಚಟುವಟಿಕೆಗಳಿಗೆ ಎಲ್‌ಸಿಆರ್‌ಪಿಗಳಿಗೆ ಪ್ರತಿ ದಿನಕ್ಕೆ ರೂ.350/- ಗಳಂತೆ 10 ದಿನಗಳ ಸಮೀಕ್ಷೆ ಕಾರ್ಯಕ್ಕೆ ರೂ.3500/- ಗೌರವಧನ ನೀಡಲಾಗುತ್ತಿದೆ.

- ತರಬೇತಿ ಹಾಗೂ ಇತರೆ ಕಾರ್ಯಗಳಿಗೆ ನಿಯೋಜಿಸಿದಾಗ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ನಿಯಮಾವಳಿಗಳಂತೆ ಸಾರಿಗೆ ಮತ್ತು ಇತರೆ ಭತ್ಯೆಯನ್ನು ನೀಡಲಾಗುತ್ತಿದೆ.

- ರಾಷ್ಟ್ರೀಯ ಜೀನೋಪಾಯ ಅಭಿಯಾನವು ಕೇಂದ್ರ ಪುರಸ್ಕೃತ ಬೇಡಿಕೆ ಆಧಾರಿತ ಯೋಜನೆಯಾಗಿದ್ದು ಅಭಿಯಾನದಡಿ ಯಾವುದೇ ಖಾಯಂ ಹುದ್ದೆಗಳು ಸೃಜನೆಗೊಂಡಿರುವುದಿಲ್ಲ. ಆದ್ದರಿಂದ ಯೋಜನಾ ಅವಧಿಗೆ ಮಾತ್ರ ಎಲ್ಲಾ ಸಿಬ್ಬಂದಿಗಳು, ಎಂ.ಬಿ.ಕೆ. (MBK) ಮತ್ತು ಎಲ್.ಸಿ.ಆರ್.ಪಿ (LCRP) ಗಳು ಕಾರ್ಯನಿರ್ವಹಿಸುವುದರಿಂದ ಯಾವುದೇ ಖಾಯಂಯಾತಿಯು ಅನ್ವಯಿಸುವುದಿಲ್ಲ. ಮುಂದುವರೆದು ಇವರಿಗೆ ನಿರ್ದಿಷ್ಟ ಚಟುವಟಿಕೆಗಳಿಗೆ, ನಿರ್ದಿಷ್ಟ ಅವಧಿಯಲ್ಲಿ ಒದಗಿಸಲಾದ ಸೇವೆಗೆ ಅನುಗುಣವಾಗಿ ನಿಗಧಿತ ಗೌರವಧನವನ್ನು ಪಾವತಿಸುವುದರಿಂದ ಅಭಿಯಾನದ ನಿಯಮಾವಳಿಗಳಂತೆ ESI-PF ಅನ್ವಯಿಸುವುದಿಲ್ಲ.

ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ಪ್ರತಿಯೊಬ್ಬ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು ನಿರ್ದಿಷ್ಟವಾಗಿರುವುದರಿಂದ ಎಂಬಿಕೆ ಹಾಗೂ ಎಲ್‌ಸಿಆರ್‌ಪಿಗಳಿಗೆ 3 ವರ್ಷದ ನಂತರ ಅವರಿಗೆ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು ತಮ್ಮ ವರಮಾನದ ಮೂಲಕ ಗೌರವಧನ ನೀಡುವ ಮಾರ್ಗಸೂಚಿಗಳನ್ನು ಭಾರತ ಸರ್ಕಾರವು ನೀಡಿರುತ್ತದೆ. ಸದರಿ ಸಿಬ್ಬಂದಿಗಳಿಗೆ ಗೌರವಧನ ಹೆಚ್ಚಿಸುವ ನಿರ್ಣಯವು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶನ ಮತ್ತು ಮಾರ್ಗಸೂಚಿಗಳೇ ಅಂತಿಮವಾಗಿರುತ್ತದೆ.

**ಸಂಖ್ಯೆ: ಕೌಉಜೀಇ 19 ಕೌಗುಪ್ರ 2023**

(ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.